ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,
12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86,

# ದಿನಾಂಕ:-19-06-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯ :ಬಿ12(5)/ಪಿಆರ್/35/2020-21 ದಿನಾಂಕ:21:09:2020
(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./22/2021-22 ದಿನಾಂಕ:16-06-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಘ.ತ್ಯಾನಿ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ ಬಿ.ಸಿ ರವಿಕುಮಾರ್ | ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀ ಕೆ ಗಂಗಹನುಮಯ್ಯ | ವಾರ್ಡ್ ಸಮಿತಿ ಸದಸ್ಯರು |
| 4. | ಶ್ರೀ ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ |
| 5. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-67 |
| 6. | ಶ್ರೀಮತಿ ಜಿ. ಶೃತಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-67 |
| 7. | ಶ್ರೀ ಗೋಪಾಲ್ ಕೃಷ್ಣ | ಸಂಚಾರಿ ಪೋಲಿಸ್ ಕಾನ್ಸಟೆಬಲ್, ರಾಜಾಜಿನಗರ ಪೊಲೀಸ್ ಠಾಣೆ |
| 8. | ಶ್ರೀ. ರಾಜಗೋಪಾಲ್ | ಟ್ಯಾಕ್ಸ್ ಇನ್ಸ್‌ಪೆಕ್ಟರ್, ನಾಗಪುರ ವಾರ್ಡ್-67 |
| 9. | ಶ್ರೀ. ಎಲ್ ಸತೀಶ್ | ಬೀದಿ ದೀಪ ಗುತ್ತಿಗೆದಾರರ ಸಿಬ್ಬಂದಿ |
| 10. | ಶ್ರೀ. ವಿಶಾಲ್ | ವಾರ್ಡ್ ಮಾರ್ಷಲ್ -67 |
| 11. | ಶ್ರೀ. ಲೋಕೇಶ್ | ಪಶು ಸಂಗೋಪನಾ ವಿಭಾಗ. |
| 12. | ಶ್ರೀ.ಮಲ್ಲಯ್ಯ | ಸಿಬ್ಬಂದಿ ಅರಣ್ಯ ಇಲಾಖೆ. ಪಶ್ಚಿಮ |
| 13. | ಶ್ರೀ. ಎನ್ ಮಂಜುನಾಥ್ | ತೋಟಗಾರಿಕೆ ಇಲಾಖೆ. ಪಶ್ಚಿಮ ವಲಯ |



ಮು.ತಿ.ನೋ.

19/06/2021

| | | |
|---|---|---|
| 14. | ಶ್ರೀ. ಶ್ರೀನಿವಾಸ್ ಗೌಡ | ವಾರ್ಡ್ ಘ.ತ್ಯಾ.ನಿ ವಾಹನಗಳ ಸರಬರಾಜುದಾರರು |
| 15. | ಶ್ರೀ. ಗಂಗಬೆಲುವಯ್ಯ | ಬೆಂ.ಜ.ಮಂ |
| 16. | ಶ್ರೀ. ಎ.ಜಿ ಮಂಜುನಾಥ್ | ಸಹಾಯಕ ಪೋಲಿಸ್ ಸಬ್ ಇನ್ಸ್ ಪೆಕ್ಟರ್ ಮಲೇಶ್ವರಂ ಪೊಲೀಸ್ ಠಾಣೆ |
| 17. | ಶ್ರೀ. ಎಚ್ ಎನ್ ರಮೇಶ್ | ಸಹಾಯಕ ಪೋಲಿಸ್ ಸಬ್ ಇನ್ಸ್ ಪೆಕ್ಟರ್ ಮಹಾಲಕ್ಷ್ಮೀಲೇಔಟ್ ಪೊಲೀಸ್ ಠಾಣೆ |
| 18. | ಶ್ರೀ. ಮಂಜು | ಸಹಾಯಕ ಪೋಲಿಸ್ ಸಬ್ ಇನ್ಸ್ ಪೆಕ್ಟರ್ ರಾಜಾಜಿನಗರ ಪೊಲೀಸ್ ಠಾಣೆ |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಜೂನ್ ಮಾಹೆಯ ಮೂರನೇ ಶನಿವಾರ ದಿ:19/06/2021ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಸಭೆಗೆ ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಸಿ.ಸಿ ಕ್ಯಾಮೇರಾ ಅಳವಡಿಸುವ ಕಾಮಗಾರಿಯ ಬಗ್ಗೆ ಮತ್ತು ಅವುಗಳ ಸಂಪರ್ಕವನ್ನು ಕೊಡುವ ಸ್ಥಳದ ಬಗ್ಗೆ ಸಹಾಯಕ ಅಭಿಯಂತರರನ್ನು ವಿಚಾರಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 | ವಾರ್ಡ್‌ನಲ್ಲಿ ಸಿ.ಸಿ ಕ್ಯಾಮೇರಾ ಅಳವಡಿಸುವ ಕಾಮಗಾರಿಯು ಮುಂದಿನ ವಾರದಿಂದ ಪ್ರಾರಂಭವಾಗುತ್ತದೆ ಮತ್ತು ಅವುಗಳ ಸಂಪರ್ಕವನ್ನು ನಾಗಪುರ 4ನೇ ಮುಖ್ಯರಸ್ತೆ, ಅಂಚೆ ಕಛೇರಿಯ ಹಿಂಭಾಗದಲ್ಲಿ ನಿರ್ಮಿಸಲಾಗುತ್ತಿರುವ ಬಿಬಿಎಂಪಿ ಕಟ್ಟಡದಲ್ಲಿ ನಿಯಂತ್ರಣ ಕೊಠಡಿಗೆ ಕೊಡಲಾಗುವುದು ಎಂದು ಮಾಹಿತಿ ಒದಗಿಸಿದರು. |
| ಶ್ರೀಮತಿ ಜಿ. ಶೃತಿ ಕಿರಿಯ ಆರೋಗ್ಯ ಪರಿವೀಕ್ಷಕರು | ವಾರ್ಡ್‌ನ ನವರಂಗ್ ಸರ್ವಿಸ್ ರಸ್ತೆಯಲ್ಲಿ ಡೆಬ್ರೀಸ್ ಇದ್ದು ಅದರಿಂದ ಸಾರ್ವಜನಿಕರು ಕಸವನ್ನು ತಂದು ಅದರ ಮೇಲೆ ಹಾಕುತ್ತಿದ್ದಾರೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 | ವಾರ್ಡ್‌ನ ಕಿರಿಯ ಆರೋಗ್ಯ ಪರಿವೀಕ್ಷಕರ ದೂರಿನಂತೆ ಡೆಬ್ರೀಸ್‌ಅನ್ನು ತೆರವುಗೊಳಿಸಲಾಗುವುದು ಎಂದು ತಿಳಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಹಿಂದಿನ ಸಭೆಯಲ್ಲಿ ಚರ್ಚಿಸಿರುವಂತೆ ಬೀದಿ ನಾಯಿಗಳ ದೂರಿನ ಬಗ್ಗೆ ವಿಚಾರಿಸಿದರು. |

ವಿಶ್ವನಾಥ್. ಪ್ರ 19/06/2021



ಮು.ತಿ.ನೋ.

| | |
|---|---|
| ಲೋಕೇಶ್<br>ಪಶು ಸಂಗೋಪನಾ ವಿಭಾಗ,<br>ಪಶ್ಚಿಮ ವಲಯ | ವಾರ್ಡ್‌ನ ಹಿಂದಿನ ಸಭೆಯಲ್ಲಿ ಚರ್ಚಿಸಿರುವಂತೆ ಬೀದಿ ನಾಯಿಗಳ ದೂರುಗಳನ್ವಯ ಈಗಾಗಲೇ ಕಾರ್ಯ ನಿರ್ವಹಿಸಿದ್ದೇವೆ ಎಂದು ಮಾಹಿತಿ ಒದಗಿಸಿದರು. |
| ಗುರುಮೂರ್ತಿ<br>ಫ.ತ್ಯಾ.ನಿ ಮೇಲ್ವಿಚಾರಕರು | ವಾರ್ಡ್‌ನ 9ನೇ ಅಡ್ಡರಸ್ತೆ ಮೋದಿ ಆಸ್ಪತ್ರೆ ಹತ್ತಿರ ನಾಯಿಗಳ ಹಾವಳಿ ಜಾಸ್ತಿ ಇದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಲೋಕೇಶ್<br>ಪಶು ಸಂಗೋಪನಾ ವಿಭಾಗ,<br>ಪಶ್ಚಿಮ ವಲಯ | ವಾರ್ಡ್‌ನ ಫ.ತ್ಯಾ.ನಿ ಮೇಲ್ವಿಚಾರಕರ ದೂರಿನ ಕುರಿತು ಬೀದಿ ನಾಯಿಗಳನ್ನು ಹಿಡಿಯುವ ಕಾರ್ಯಾಚರಣೆ ಮಾಡಲಾಗುವುದಾಗಿ ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕೋವಿಡ್-19 ಪ್ರಕರಣಗಳ ಕುರಿತು ಮಾಹಿತಿ ಕೊಡಲು ಹಿರಿಯ ಆರೋಗ್ಯ ಪರೀವಿಕ್ಷಕರಿಗೆ ತಿಳಿಸಿದರು. |
| ಗಂಗಯ್ಯ<br>ಹಿರಿಯ ಆರೋಗ್ಯ ಪರಿವೀಕ್ಷಕರು | ವಾರ್ಡ್‌ನಲ್ಲಿ ಕೋವಿಡ್-19 ಪ್ರಕರಣಗಳು ಕೆಲವು ದಿನಗಳಿಂದ ಕಡಿಮೆ ದಾಖಲಾಗುತ್ತಿದೆ ಹಾಗು ಪ್ರತಿನಿತ್ಯಾ 18ವರ್ಷ ಮೇಲ್ಪಟ ಸಾರ್ವಜನಿಕರಿಗೆ ಲಸಿಕೆ ನೀಡುತ್ತಿರುವುದು ಚಾಲ್ತಿಯಲ್ಲಿರುತ್ತದೆ ಎಂದು ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ ಉದಯ ಶಂಕರ್<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ 20ನೇ 'ಎ' ಮೈನಲ್ಲಿ ಪಾದಚಾರಿ ಮಾರ್ಗದಲ್ಲಿ ಹಾಗು ರಸ್ತೆಗೆ ಅಡಲಾಗಿ ಗಿಡಗಳನ್ನು ಬೆಳೆಸಲು ಗೋಡೆಯನ್ನು ನಿರ್ಮಿಸಿದ್ದಾರೆ ಅದರಿಂದ ಪಾದಚಾರಿಗಳಿಗೆ ಹಾಗು ವಾಹನ ಸವಾರರಿಗೆ ತೊಂದರೆ ಉಂಟಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್<br>ಸಹಾಯಕ ಅಭಿಯಂತರರು<br>ವಾರ್ಡ್-67 | ವಾರ್ಡ್ ಸಮಿತಿ ಸದಸ್ಯರ ದೂರಿನ ಕೂರಿತು ರಾಜಾಜಿನಗರ 1ನೇ ಬ್ಲಾಕ್‌ನ 20ನೇ 'ಎ' ಮೈನ್‌ನಲ್ಲಿ ಪಾದಚಾರಿ ಮಾರ್ಗ ಒತುವರಿ ಮಾಡಿ ಹಾಗು ರಸ್ತೆಯ ಜಾಗದಲ್ಲಿ ಗೋಡೆಯನ್ನು ನಿರ್ಮಿಸಿರುವುದು ವಾರ್ಡ್ ಪರೀವಿಕ್ಷಣೆ ಸಮಯದಲ್ಲಿ ಕಂಡುಬಂದಿರುತ್ತದೆ ಈಗಾಗಲೇ ಮನೆಯ ಮಾಲಿಕರಿಗೆ ಗೋಡೆಯನ್ನು ತೆರವುಗೊಳಿಸಲು ಮೌಖಿಕವಾಗಿ ತಿಳಿಸಲಾಗಿರುತ್ತದೆ, ಗೋಡೆಯನ್ನು ತೆರವುಗೋಳಿಸಲು ಮನೆಯ ಮಾಲಿಕರು ತಪ್ಪಿದಲ್ಲಿ ಮುಂದಿನ ಕ್ರಮ ತೆಗೆದುಕೊಳಲಾಗುವುದೆಂದು ತಿಳಿಸಿದರು. |
| ಶ್ರೀ ಗುರುಮೂರ್ತಿ<br>ಫ.ತ್ಯಾ.ನಿ ಮೇಲ್ವಿಚಾರಕರು | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ 19ನೇ 'ಎಚ್' ಮೈನ್‌ನಲ್ಲಿ ಮರವನ್ನು ಟ್ರಿಮಿಂಗ್ ಮಾಡಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ಮಲ್ಲಯ್ಯ<br>ಅರಣ್ಯ ಇಲಾಖೆ | ವಾರ್ಡ್‌ನ ಫ.ತ್ಯಾ.ನಿ ಮೇಲ್ವಿಚಾರಕರ ದೂರಿನಂತೆ ರಾಜಾಜಿನಗರ 1ನೇ ಬ್ಲಾಕ್‌ನ 19ನೇ 'ಎಚ್' ಮೈನ್‌ನ ಮರವನ್ನು ಸ್ಥಳ ಪರೀಶಿಲಿಸಿ ಟ್ರಿಮ್ಮಿಂಗ್ ಮಾಡಿಕೊಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್‌ನ ಹೋಟಲ್‌ಗಳಲ್ಲಿ ಪಾರ್ಸಲ್ ಮಾಡಲು ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದು ಕಂಡುಬಂದಿರುತ್ತದೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳಲು ತಿಳಿಸಿದರು. |
| ಗಂಗಯ್ಯ<br>ಹಿರಿಯ ಆರೋಗ್ಯ ಪರಿವೀಕ್ಷಕರು | ವಾರ್ಡ್‌ನ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವ ಹೋಟಲ್‌ಗಳ ಮೇಲೆ ರೈಡ್ ಮಾಡಿ ದಂಡ ಹಾಕಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |



19/06/2021

ಮು.ತಿ.ನೋ.

| | |
|---|---|
| ಶ್ರೀ. ಶ್ರೀನಿವಾಸ್ ಗೌಡ ಘ.ತ್ಯಾನಿ ವಾಹನ ಸರಭರಾಜುದಾರರು. | ವಾರ್ಡ್‌ನ ಘ.ತ್ಯಾನಿ ಸರಭರಾಜುದಾರರಿಗೆ ಜನವರಿ-2021 ಮಾಹೆಯಿಂದ ಇಲಾಖೆ ವತಿಯಿಂದ ಕಸದ ಬಿಲ್ ಪಾವತಿಮಾಡಿರುವುದಿಲ್ಲ ಹಾಗು ಕೋವಿಡ್-19 (ಸ್ಯಾನಿಟೈಸೇಷನ್ ಹಾಗು ಸೀಲ್‌ಡೌನ್) ಬಿಲ್ ಪಾವತಿಮಾಡಿರುವುದಿಲ್ಲ ಇದನ್ನು ಕುರಿತು ಪತ್ರವನ್ನು ಸಹ ಹಿರಿಯ ಅಧಿಕಾರಿಗಳಿಗೆ ನೀಡಿರುತ್ತೇನೆ. ಇದರಿಂದ ಘ.ತ್ಯಾನಿ ಗುತ್ತಿಗೆದಾರರಿಗೆ ಬಹಳ ಸಮಸ್ಯೆ ಉಂಟಾಗುತ್ತಿರುವುದಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು. ವಾರ್ಡ್‌ನ ಸಮಿತಿ ಸದಸ್ಯರು ಈ ಕುರಿತು ಗುತ್ತಿಗೆದಾರರಿಗೆ ಹಣ ಪಾವತಿ ಮಾಡಲು ಮನವಿ ಸಲ್ಲಿಸಿದರು. |
| ಶ್ರೀ. ಮಂಜು ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ | ಹಿರಿಯ ಅಧಿಕಾರಿಗಳು ಸಭೆಗಳಲ್ಲಿ ತಿಳಿಸಿರುವಂತೆ, ಮಳೆಗಾಲ ಶುರುವಾಗಿರುವುದರಿಂದ ಮಳೆಯಿಂದಾಗಿ ಬೀದಿ ದೀಪ ಸಮಸ್ಯೆಗಳು ಹಾಗು ವಾರ್ಡ್‌ನ ಎಲ್ಲಾ ಕಡೆ ಸಿ.ಸಿ ಕ್ಯಾಮೇರಾಗಳ ಕಾರ್ಯಾಚರಣೆ ಮತ್ತು ರಸ್ತೆ ಗುಂಡಿಗಳು ಹಾಗು ಇತರೆ ತುರ್ತ ದೂರುಗಳನ್ನು ಸಂಭಂದಪಟ್ಟ ಇಲಾಖೆಯವರು ಅಟೆಂಡ್ ಮಾಡಿದ್ದಲ್ಲಿ ರಸ್ತೆ ಅಪಘಾತಗಳನ್ನು ತಡೆಯಬಹುದು ಹಾಗು ಸಾರ್ವಜನಿಕರಿಗೆ ಒಳಿತಾಗುವುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ರಾಜಾಜಿನಗರ ಸಹಾಯಕ ಪೋಲಿಸ್ ಸಬ್‌ಇನ್ಸ್‌ಪೆಕ್ಟರ್‌ರವರು ತಿಳಿಸಿರುವಂತೆ ಬೀದಿ ದೀಪ ಸಮಸ್ಯೆಗಳು, ರಸ್ತೆ ಗುಂಡಿಗಳು ಸಂಭಂದಪಟ್ಟ ಇಲಾಖೆಯವರು ದೂರುಗಳನ್ನು ತುರ್ತಾಗಿ ಆಲಿಸುವಂತೆ ಸಭೆಯಲ್ಲಿ ಸೂಚಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 | ವಾರ್ಡ್‌ನಲ್ಲಿ ರಸ್ತೆ ಗುಂಡಿಗಳ ದೂರುಗಳು ಹೆಚ್ಚಾಗಿರುವುದರಿಂದ ರಸ್ತೆ ಗುಂಡಿಗಳಿಗೆ ಪ್ಯಾಚ್ ವರ್ಕ್ ಮಾಡಬೇಕು, ಪ್ಯಾಚ್ ವರ್ಕ್ ಮಾಡಿಸಲು ಹಾಟ್ ಮಿಕ್ಸ್ ಪ್ಲಾಂಟ್‌ನಿಂದ ಮಿಕ್ಸ್ ಕಳಿಸಲು ಮನವಿ ಮಾಡಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಹಾಟ್ ಮಿಕ್ಸ್ ಪ್ಲಾಂಟ್‌ನಿಂದ ಮಿಕ್ಸ್ ಕಳಿಸಲು ಇಂಡೆಂಟ್ ಹಾಕಲು ಸಭೆಯಲ್ಲಿ ಮಂಡಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಾಜಾಜಿನಗರ 'ಆರ್' ಹಾಗು 'ಎನ್' ಬ್ಲಾಕ್ ಉದ್ಯಾನಗಳಲ್ಲಿ ಬೇವಿನ ಸಸಿಗಳನ್ನು ನೆಡಲು ಅರಣ್ಯ ಇಲಾಖೆಯ ಸಿಬ್ಬಂದಿರವರಿಗೆ ಸೂಚಿಸಿದರು. |
| ಶ್ರೀ.ಮಲ್ಲಯ್ಯ ಅರಣ್ಯ ಇಲಾಖೆ | ವಾರ್ಡ್‌ನ ಅಧ್ಯಕ್ಷರು ಸೂಚಿಸಿರುವಂತೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಬೇವಿನ ಸಸಿಗಳನ್ನು ನೆಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ ಉದಯ ಶಂಕರ್ ವಾರ್ಡ್ ಸಮಿತಿ ಸದಸ್ಯರು | ಮಹಾಲಕ್ಷ್ಮೀಲೇಔಟ್ ಸಿಗ್ನಲ್ ಹತ್ತಿರ ಪಾದಚಾರಿ ಮಾರ್ಗ ಅಡ್ಡವಾಗಿ ಅಂಗಡಿ ಮಾಲೀಕರು ಅಂಗಡಿ ಮಾರ್ಪಾಡು ಮಾಡಿ ರಸ್ತೆಗೆ ಅಡ್ಡಲಾಗಿ ಹಳೆಯ ವಸ್ತುಗಳನ್ನು ಹಾಕಿದ್ದಾರೆ ಇದರಿಂದ ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿದೆ. |
| ಶ್ರೀ. ಎ.ಜಿ ಮಂಜುನಾಥ್ ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ | ಡಾ॥ ರಾಜ್‌ಕುಮಾರ್ ರಸ್ತೆಯಲ್ಲಿ ಪೈಪ್‌ಲೈನ್‌ಗಾಗಿ ರಸ್ತೆ ದೂರಸ್ತಿ ಮಾಡಿದ್ದು ಅದ್ದಕ್ಕೆ ಪ್ಯಾಚ್ ವರ್ಕ್ ಮಾಡಲು ಸೂಚಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ಬೆಂಗಳುರು ನೀರು ಸರಬರಾಜು ಮಂಡಳಿಯ ಅಭಿಯಂತರರಿಗೆ ರವರು ಕ್ರಮ ವಹಿಸಲು ಸೂಚಿಸಿದರು. |

ವಿಶ್ವನಾಥ್.ತ್ರಾ
19/06/2021



ಮು.ತಿ.ನೋ.

ಶನ್ (ರಿ)

ನ (R)

'1

**ಪ್ರತಿಯನ್ನು**

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನ ಸಲ್ಲಿಸಿದೆ.
   ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

19/06/24

**ಕಾರ್ಯದರ್ಶಿ ಹಾಗೂ**
**ಸಹಾಯಕ ಅಭಿಯಂತರರು, ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

19/06/2024

**ಅಧ್ಯಕ್ಷರು ಹಾಗೂ**
**ನೋಡಲ್ ಅಧಿಕಾರಿಗಳು ವಾರ್ಡ್– 67**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**



ಪು.ತಿ.ನೋ.